ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ.540/2020

ಸಿ.ಡಬ್ಲೂ:3 ಪಿ.ಡಬ್ಲೂ:1

ಸಾಕ್ಷಿಗೆ ದಿನಾಂಕ 16/02/2024 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಬಸನಗೌಡ |
| ತಂ/ಗಂ. ಹೆಸರು | ರಾಮನಗೌಡ ಪಾಟೀಲ |
| ವಯಸ್ಸು | 75 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಪಡಗಾನೂರ |

**ಮುಖ್ಯ ವಿಚಾರಣೆ ಃ ಶ್ರೀ ಎಪಿಪಿ ಯವರಿಂದ**

ಸುಮಾರು 3 ವರ್ಷಗಳ ಹಿಂದೆ ನಾನು ದೇವರ ಹಿಪ್ಪರಗಿ ಪೋಲಿಸ್ ಠಾಣೆಯಲ್ಲಿ ಪೋಲಿಸರು ಒಂದು ದಾಖಲೆಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಯಾವ ಕಾರಣಕ್ಕಾಗಿ ಸಹಿ ಪಡೆದರು ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯು ಜಪ್ತುಪಂಚನಾಮೆಯಾಗಿದ್ದು ಅದರಲ್ಲಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 1 ಎಂದು, ಸಾಕ್ಷಿಯು ಸಹಿಯನ್ನು ನಿ.ಪಿ. 1 ಎ ಎಂದು ಗುರುತಿಸಲಾಯಿತು. ಆರೋಪಿ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ. ನಿ.ಪಿ. 1 ರಲ್ಲಿ ಬರೆದಿರುವ ವಿಷಯ ಗೊತ್ತಿಲ್ಲ. ಭಾವ ಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅದಕ್ಕೆ ಆರೋಪಿ ಪರ ವಕೀಲರು ಯಾವುದೇ ತಕರಾರು ವ್ಯಕ್ತಪಡಿಸದ ಕಾರಣ ಮತ್ತು ಸಾಕ್ಷಿಯು ಪ್ರತ್ಯೇಕ್ಷ ಸಾಕ್ಷಿಯಾಗಿದ್ದು ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಪಾಟೀ ಸವಾಲು ಃ ಎ.ಪಿ.ಪಿ. ಯವರಿಂದ

ದಿನಾಂಕ 06-07-2020 ರಂದು ಬೆಳಿಗ್ಗೆ 10 ರಿಂದ 11 ಗಂಟೆಗೆಯವರೆಗೆ ಚಾ ಸಾ 1 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾ ಸಾ 2 ರವರ ಸಮಕ್ಷಮ ನಿ.ಪಿ. 1 ರಲ್ಲಿ ತೋರಿಸಿದಂತೆ ಪಂಚನಾಮೆ ತಯಾರಿಸಿ ಸ್ಥಳದಲ್ಲಿ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ನಿಜ. ನನ್ನ ಜೊತೆ ಚಾ ಸಾ 1 ಮತ್ತು 2 ಹಾಜರಿದ್ದರು ಎಂದರೆ ನಿಜ. ನಿಪಿ 1 ನನ್ನ ಸಮಕ್ಷಮ ಬರೆದು ನಂತರ ನಿ.ಪಿ. 2 ರಂತೆ ಭಾವ ಚಿತ್ರ ತೆಗೆದಿರುತ್ತಾರೆ ಎಂದರೆ ನಿಜ.

**ಸಿ.ಡಬ್ಲ್ಯೂ:3 ಪಿ.ಡಬ್ಲ್ಯೂ:1**

**ಪಾಟೀ ಸವಾಲು ಶ್ರೀ ಎಸ್ ಎ ಬಿ ವಕೀಲರಿಂದ**

ನಿಪಿ 1 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ನಿಜ. ಪೋಲಿಸರ ಹೇಳಿಕೆಯ ಮೇಲೆ ಒಂದು ಬಿಳಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ನಿಜ. ಅದರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ನಿಜ. ಭಾವ ಚಿತ್ರದಲ್ಲಿ ಪೋಲಿಸರು ಹೇಳಿದ್ದರಿಂದ ನಿಂತಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಪೊಲೀಸರು ಹೇಳಿದ್ದರಿಂದ ನಾನು ಬಂದಿರುತ್ತೇನೆ ಎಂದರೆ ನಿಜ.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ